# ಆಹಾ ಸುದ್ದಿ!

★ ಸಸಿತೋಟ



ಮೆಕ್ಸಿಕೋದ ಮಕ್ಕಳ ತಜ್ಞ ಮಕ್ಕಳನ್ನು ರಂಜಿಸಲು ತನ್ನ ಆಸ್ಪತ್ರೆಯಲ್ಲಿ ಈ ರೀತಿ ಸೂಪರ್ ಹೀರೋಗಳ ವೇಷವನ್ನು ಹಾಕಿಕೊಂಡು ಓಡಾಡುತ್ತಾನಂತೆ. ಉದರನಿಮಿತ್ತಂ ಬಹುಕೃತ ವೇಷಂ ಗಾದೆಯನ್ನು ನಕಲಿ ವೈದ್ಯರು ಹೇಳಿಕೊಂಡು ಓಡಾಡುತ್ತಿರುವಾಗ ಈ ವೈದ್ಯನ ನಿಜವಾದ ಕಾಳಜಿ ಮೆಚ್ಚುವಂಥದ್ದೇ.



ಚೀನಾದ ವ್ಯಕ್ತಿಯೊಬ್ಬ ತಾನು ಸಾಕಿದ ಕತ್ತೆಯ ಮೂಗಿಗೆ ಮನೆಯಲ್ಲೇ ತಯಾರಿಸಿದ ಸಿಗರೇಟ್ ತೂರಿಸಿ ಅದನ್ನು ಧೂಮಪಾನಿಯನ್ನಾಗಿ ಮಾಡಿದ್ದಾನಂತೆ. ಅದು ಕಿರಿಕಿರಿ ಮಾಡಿದಾಗಲೆಲ್ಲ ಆತ ಈ ರೀತಿ ಸಿಗರೇಟ್ ಆಮಿಷ ತೋರಿಸುತ್ತಾನಂತೆ. ಸಿಗರೇಟ್ ಸೇವನೆ ಆರೋಗ್ಯಕ್ಕೆ ಹಾನಿಕರ ಎಂದು ಕತ್ತೆಯ ಮುಂದೆ ಹೇಳಿಕೊಂಡು ಕಿನ್ನರಿ ಬಾರಿಸುತ್ತಾನೋ ಗೊತ್ತಾಗಲಿಲ್ಲ.

ಜೀವಮಾನವಿಡೀ ಬರ್ಗರ್ ತಿನ್ನಬೇಕಾ? ಹಾಗಾದರೆ ನೀವೇ ಬರ್ಗರ್ ಆಗಿಬಿಡಿ ಎನ್ನುತ್ತದೆ ಆಸ್ಟ್ರೇಲಿಯಾದ ಮಿ.ಬರ್ಗರ್ ಫಾಸ್ಟ್‌ಫುಡ್ ಕಂಪೆನಿ. ಅಂದರೆ ನಿಮ್ಮ ಅಡ್ಡ ಹೆಸರನ್ನು ಬರ್ಗರ್ ಎಂದು ಅಧಿಕೃತವಾಗಿ ಬದಲಾಯಿಸಿಕೊಳ್ಳಬೇಕಂತೆ. ಇದಕ್ಕಾಗಿ ದಾಖಲೆಯನ್ನೂ ಸಲ್ಲಿಸಬೇಕಂತೆ. ಆದರೆ ಸಣ್ಣದೊಂದು ಸಮಸ್ಯೆ, ಇದಕ್ಕಾಗಿ ನೀವು ಆಸ್ಟ್ರೇಲಿಯ ನಾಗರಿಕರಾಗಿರಬೇಕು.

ಚೀನಾದಲ್ಲಿ ಕಲಾವಿದನೊಬ್ಬ ಮೆಟ್ಟಿಲುಗಳಿಗೆ ಪ್ಲಾಸ್ಟಿಕ್ ಕಪ್‌ಗಳಿಂದ ಸಿಂಗರಿಸಿ ಕಲಾಕೃತಿ ರಚಿಸಿದ್ದಾನಂತೆ. ಇಷ್ಟೇ ಆದರೆ ಎಲ್ಲಾ ನೋಡಿಕೊಂಡು ಹೋಗುತ್ತಿದ್ದರೇನೊ. ಆದರೆ ಆ ಕಪ್‌ಗಳಲ್ಲಿ ಬಣ್ಣ ಬಣ್ಣದ ಪಾನಕ ತುಂಬಿಸಿದ್ದಾನಂತೆ. ಈ ವ್ಯವಸ್ಥೆ ಮೆಟ್ಟಿಲು ಏರಿ ಸುಸ್ತಾದವರಿಗೋ ಅಥವಾ ಕಲಾಕೃತಿ ನೋಡಿ ಸುಸ್ತು ಬಡಿದವರಿಗೋ!



ಅಮೆರಿಕದಲ್ಲಿ ಶೇ.69ರಷ್ಟು ಮಂದಿ ಶೌಚಾಲಯದಲ್ಲಿ ಸ್ಮಾರ್ಟ್‌ಫೋನ್ ಹಿಡಿದುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ವಿಹರಿಸುತ್ತಾರಂತೆ. ಇದರಲ್ಲಿ ಹೆಚ್ಚಿನ ಪುರುಷರು ನೀಲಿಚಿತ್ರಗಳನ್ನು ವೀಕ್ಷಿಸುತ್ತಾರಂತೆ. ತಾಳಿ, ಮಹಿಳಾ ವಿಶೇಷವೂ ಇದೆ. ಮಹಿಳೆಯರು ಮಾತ್ರ ಸ್ನಾನದ ಕೊಠಡಿಯಲ್ಲಿ ತಮ್ಮ ಸೆಲ್ಫಿ ತೆಗೆದುಕೊಳ್ಳುತ್ತಾರಂತೆ. ಈ ವಿಷಯದಲ್ಲಿ ಪುರುಷರು ಹಿಂದುಳಿದಿದ್ದು ಯಾಕೋ!

ಆರ್ಕ್ಟಿಕ್ ಸಾಗರದಲ್ಲಿ ತೇಲುವ ಮಂಜುಗಡ್ಡೆಯ ಮೇಲೆ ಈ ರೀತಿ ಸಂಗೀತ ಕಾರ್ಯಕ್ರಮ ನೀಡಿದ ಕಲಾವಿದ ಇಟಲಿಯ ಖ್ಯಾತ ಪಿಯಾನೊ ವಾದಕ ಲುಡುವಿಕೊ. ಅತ್ಯಂತ ವೇಗವಾಗಿ ಕರಗುತ್ತಿರುವ ಈ ಹಿಮ ಸಾಗರದ ರಕ್ಷಣೆಗೆ ಜಾಗತಿಕ ನಾಯಕರ ಗಮನ ಸೆಳೆಯಲು ಗ್ರೀನ್‌ಪೀಸ್ ಈ ಕಾರ್ಯಕ್ರಮ ಏರ್ಪಡಿಸಿತ್ತು. ಆಲೋಚನೆ ಒಳ್ಳೆಯದೇ. ಆದರೆ ಈಗಾಗಲೇ ಮೀನುಗಾರಿಕೆ, ತೈಲಬಾವಿ, ಪ್ರವಾಸೋದ್ಯಮ ಎಂದು ಹಿಮದಿಂದ ದುಡ್ಡು ಮಾಡುತ್ತಿರುವವರಿಗೆ ಒಂದು ಹೊಸ ಉದ್ಯಮದ ಐಡಿಯಾ ಕೊಟ್ಟಂತಿದೆ.

